

ಬಾನಿನಲ್ಲಿ ನಕ್ಷತ್ರಗಳ ಅಂಗಡಿಯ ಬಾಗಿಲು ನಿಧಾನಕ್ಕೆ ತೆರೆಯುತ್ತಿದೆ. ಅಂಗಡಿಯ ಮಾಲೀಕ ಚಂದಿರ ಕುರ್ಚಿಯ ಮೇಲೆ ಕೂತು ಬೆಳಕಿನ ವ್ಯಾಪಾರಕ್ಕೆ ಇಳಿಯುತ್ತಿದ್ದಾನೆ. ದೊಡ್ಡಿಯಿಂದ ರಸ್ತೆಗೆ ರಸ್ತೆಯಿಂದ ದೊಡ್ಡಿಗೆ ತಣಕು ಪಿಣಕು ಕುಣಿದ ಮೇಕೆ ಮರಿಗಳಿಗೆ ಈಗ ಅಮ್ಮನ ಮೊಲೆಯ ನೆನಪಾಗಿದೆ. ದಾರಿ ಕಡೆ ಕೂಗಿ ಕರೆಯುತ್ತಿವೆ. ಅಲ್ಲಿ ಅಂಗಳದಲ್ಲಿ ಬರುವ ದನಗಳ ದೂಳಿನ ಮಧ್ಯೆ ತನ್ನ ಅಮ್ಮನಿಗಾಗಿ ಹುಡುಕುತ್ತಿವೆ.

ಹೊಕ್ಕುಳದ ಕೆಳಗೆ ನೆರಿಗೆ ಸಿಕ್ಕಿಸಿಕೊಂಡ ಆಕೆ ಗಿರಾಕಿಗಳಿಗಾಗಿ ಕೆಂಪು ಬಣ್ಣದ ಲಿಪ್‌ಸ್ಟಿಕ್ ಬಳಿದು ಕೊಳ್ಳುತ್ತಾಳೆ. ಎಷ್ಟೋ ಬಾರಿ ಸಂಜೆಗಳಲ್ಲಿ ಗಿರಾಕಿ ಸಿಗದೆ ಹಚ್ಚಿದ ಲಿಪಿಸ್ಟಿಕ್‌ಗೂ ಮರ್ಯಾದೆ ಉಳಿದಿಲ್ಲ. ಅವಳು ಮುಡಿದ ಮಲ್ಲಿಗೆಗೆ ಯಾಕೋ ವಾಸನೆಯಿಲ್ಲ. ಸಂಜೆಯ ಮಬ್ಬುಗತ್ತಲು ಅವಳ ಕಣ್ಣೀರನ್ನು ಬಚ್ಚಿಡಲು ಹೆಣಗುತ್ತಿದೆ.

ಸಂಜೆಯ ಈ ಕೆಂಪು ತನ್ನ ಕತ್ತು ಹಿಸುಕಲಿ ಅಂತ ಆಕೆ ಬಯಸುತ್ತಾಳೆ. ಆದರೆ, ಆ ಕೆಂಪು ಕಡಲಿನಲ್ಲಿ ಇಳಿಯುತ್ತಿರುವ ಸೂರ್ಯನ ಕತ್ತು ಹಿಸುಕುತ್ತದೆ. ಬೆಳಕು ಸವೆಯುತ್ತಾ ಹೋದಂತೆ ‘ಮಗಾ ಇನ್ನೂ ಮನೆಗೆ ಬಂದಿಲ್ಲ...’ ಅಂತ ಅಲ್ಲೊಬ್ಬ ತಾಯಿಯ ಕರುಳು ಕನವರಿಸುತ್ತದೆ. ‘ಮಗಳು ಬರುವ ಹೊತ್ತು ಮೀರಿತು.. ಅವಳ ಸುದ್ದಿಯಿಲ್ಲ’ ಇಲ್ಲೊಬ್ಬ ತಾಯಿಯ ಎದೆಬಡಿತ ಅಂಗಳಕ್ಕೂ ಕೇಳಿಸುತ್ತಿದೆ.

ಕಚೇರಿಗಳಲ್ಲಿ ಕಿಟಕಿಗಳು ರಪ್ ಅಂತ ಬಾಚಿ ಬೀಳುತ್ತವೆ. ಬ್ಯಾಗ್ ಎತ್ತಿಕೊಂಡು ಎಲ್ಲರೂ ದುಡುದುಡು ಹೊರಡುತ್ತಿದ್ದಾರೆ. ತಮ್ಮ